ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ:ಇ-ಆಡಳಿತ/ಸಕಾಲ-ಹೆ.ಸೇಸೇ.1/2012-13. ದಿನಾಂಕ:21-11-2012

**ಸು ತ್ತೋ ಲೆ** **ಸಕಾಲ - ಮುಖ್ಯವಾದುದ್ದು**

ವಿಷಯ: ಕರ್ನಾಟಕ ನಾಗರೀಕ ಸೇವೆ ಅಧಿನಿಯಮ-2011(ಸಕಾಲ) ಯೋಜನೆಯಡಿ ಇಲಾಖೆಯ ಹೆಚ್ಚುವರಿ ಸೇವೆಗಳನ್ನು ಸೇರ್ಪಡಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ.9.ಪ್ರಕಾ(ಆಸು)2012 ದಿನಾಂಕ:27-02-2012.

ಉಲ್ಲೇಖಿತ ಸರ್ಕಾರಿ ಆದೇಶದನ್ವಯ ಈಗಾಗಲೇ ಸಾರ್ವಜನಿಕ ಶಿಕ್ಷಣ ಇಲಾಖೆಯ ವತಿಯಿಂದ ಕರ್ನಾಟಕ ನಾಗರೀಕ ಸೇವೆ ಅಧಿನಿಯಮ-2011(ಸಕಾಲ) ಯೋಜನೆಯಡಿಯಲ್ಲಿ ಈ ಕೆಳಕಂಡ ಸೇವೆಗಳನ್ನು ಸೇರಿಸಲಾಗಿದ್ದು, ಯಶಸ್ವಿಯಾಗಿ ಕಾರ್ಯ ನಿರ್ವಹಣೆಯಾಗುತ್ತಿದೆ.

1) ಎಸ್.ಎಸ್.ಎಲ್..ಸಿ. ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಮರು ಎಣಿಕೆ,
2) ಎಸ್.ಎಸ್.ಎಲ್..ಸಿ. ಪರೀಕ್ಷೆಯ ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನ,
3) ಎಸ್.ಎಸ್.ಎಲ್..ಸಿ. ಪರೀಕ್ಷೆಯ ಅಂಕಪಟ್ಟಿ ಎರಡನೇ ಪ್ರತಿ/ತಾತ್ಕಾಲಿಕ ಅಂಕಪಟ್ಟಿಯನ್ನು ನೀಡುವುದು,
4) ಹೊಸ ಶೈಕ್ಷಣಿಕ ಸಂಸ್ಥೆಗಳ ನೊಂದಣಿ,
5) ಹೊಸ ಶಾಲೆಗಳಿಗೆ ಮಾನ್ಯತೆ ನೀಡುವುದು,
6) ಶಾಲೆಗಳ ಮಾನ್ಯತೆ ನವೀಕರಣ ಮಾಡುವುದು

ಮೇಲಿನ ಕ್ರಮ ಸಂಖ್ಯೆ 1 ರಿಂದ 3 ಸೇವೆಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಸಂಬಂಧಿಸಿದ್ದು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ಅರ್ಜಿಗಳನ್ನು ಸ್ವೀಕರಿಸಿ ಸೇವೆಗಳನ್ನು ನೀಡಲಾಗುತ್ತಿದೆ. ಕ್ರಮಸಂಖ್ಯೆ 4 ರಿಂದ 6 ಸೇವೆಗಳು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಅರ್ಜಿಗಳನ್ನು ಸ್ವೀಕರಿಸಿ ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸುವ ಮೂಲಕ ಸೇವೆಗಳನ್ನು ನೀಡಲಾಗುತ್ತಿರುವುದು ಸರಿಯಷ್ಟೆ.

ಸಾರ್ವಜನಿಕರಿಂದ ಇಲಾಖೆಯ ಮೇಲಿನ ಸೇವೆಗಳಿಗೆ ಉತ್ತಮ ಪ್ರತಿಕ್ರಿಯೆ ದೊರೆತಿದ್ದು, ಸರ್ಕಾರವು ಇಲಾಖೆಯ ಇನ್ನೂ 6 ಸೇವೆಗಳನ್ನು ಸಕಾಲ ವ್ಯಾಪ್ತಿಗೊಳಪಡಿಸಿದ್ದು, ಒಟ್ಟು 12 ಸೇವೆಗಳು ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ನೀಡಬೇಕಾಗಿದೆ. ಸದರಿ ಹೆಚ್ಚುವರಿ 6 ಸೇವೆಗಳು ಡಿಸೆಂಬರ್ 3, 2012 ರಿಂದ ಕರ್ನಾಟಕಾದ್ಯಂತ ಜಾರಿಗೆ ಬರಲಿದೆ. ಅವುಗಳು ಈ ಕೆಳಕಂಡಂತಿವೆ.

1) ವಲಸೆ ಪ್ರಮಾಣ ಪತ್ರ ನೀಡಿಕೆ,
2) ಹುಟ್ಟಿದ ದಿನಾಂಕ ದೃಢೀಕರಣ ಪ್ರಮಾಣ ಪತ್ರ,
3) ಅಂಕಗಳ ಮರು ಎಣಿಕೆ ಇತರೆ ಪರೀಕ್ಷೆಗಳು,
4) ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನ ಇತರೆ ಪರೀಕ್ಷೆಗಳು,
5) ದ್ವಿತೀಯ ಅಂಕಪಟ್ಟಿ ಪ್ರತಿ ನೀಡುವುದು ಸಾಮಾನ್ಯ ಪ್ರಕರಣ -ಇತರೆ ಪರೀಕ್ಷೆಗಳು,
6) ದ್ವಿತೀಯ ಅಂಕಪಟ್ಟಿ ಪ್ರತಿ ನೀಡುವುದು ತುರ್ತು ಪ್ರಕರಣ -ಇತರೆ ಪರೀಕ್ಷೆಗಳು

ಇವುಗಳು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಎಸ್.ಎಸ್.ಎಲ್.ಸಿ. ಹಾಗೂ ಇತರೆ ಪರೀಕ್ಷೆಗಳಿಗೆ ಸಂಬಂಧಿಸಿದ್ದು, ಸದರಿ ಸೇವೆಗಳ ವಿವರಗಳನ್ನು ಸಕಾಲ ತಂತ್ರಾಂಶದಲ್ಲಿ ಈಗಾಗಲೇ ಅಳವಡಿಸಲಾಗಿದೆ. ಆದ್ದರಿಂದ ಮೇಲೆ ಪ್ರಸ್ತಾಪಿಸಲಾದ ಸೇವೆಗಳ ಜೊತೆಗೆ ಈ ಸೇವೆಗಳನ್ನು ಸಕಾಲ ಯೋಜನೆಯಡಿಯಲ್ಲಿ ನಿಗದಿತ ಅವಧಿಯಲ್ಲಿ ಅರ್ಜಿದಾರರಿಗೆ ಸೂಕ್ತ ಸಮಯದಲ್ಲಿ ವಿತರಿಸಲು ಸಂಬಂಧಪಟ್ಟ ಅಧಿಕಾರಿಗಳು ಕ್ರಮವಹಿಸುವುದು.

ಸಕಾಲ ಯೋಜನೆಯಡಿಯಲ್ಲಿ ಅಧಿಸೂಚಿಸಲಾಗಿರುವ ಎಲ್ಲಾ ಸೇವೆಗಳನ್ನು ಸಕಾಲ ತಂತ್ರಾಂಶದ ಮೂಲಕವೇ ಸ್ವೀಕರಿಸಿ ನಿಗದಿತ ಸಮಯದೊಳಗೆ ಸೇವೆಗಳನ್ನು ನೀಡಬೇಕಾಗಿರುತ್ತದೆ. ಯಾವುದೇ ಕಾರಣಕ್ಕೂ ಸದರಿ ಸೇವೆಗಳ ಅರ್ಜಿಗಳನ್ನು ನೇರವಾಗಿ ಸ್ವೀಕರಿಸಿ ಕ್ರಮವಹಿಸಬಾರದು. ಇಂತಹ ಪ್ರಕರಣಗಳು ಕಂಡುಬಂದಲ್ಲಿ ಸಂಬಂಧಿಸದವರ ಮೇಲೆ ಸೂಕ್ತ ಶಿಸ್ತಿನ ಕ್ರಮವನ್ನು ವಹಿಸಲಾಗುವುದು.

ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಕ್ಷಮ ಪ್ರಾಧಿಕಾರವಲ್ಲದಿದ್ದರೂ ಸಹಾ 3 ಸಕಾಲ ಸೇವೆಗಳಾದ ಶಾಲೆಗಳ ನೊಂದಣಿ, ಮಾನ್ಯತೆ ನೀಡುವಿಕೆ ಹಾಗೂ ಮಾನ್ಯತೆ ನವೀಕರಣಕ್ಕೆ ಸಂಭಂಧಿಸಿದಂತಹ ಅರ್ಜಿಗಳನ್ನು ಸ್ವೀಕರಿಸುವ ಸಂದರ್ಭದಲ್ಲಿ ತಂತ್ರಾಂಶದಲ್ಲಿ ಅಳವಡಿಸಿರುವ ಚೆಕ್‌ಲಿಸ್ಟ್ ಅನ್ವಯ ಎಲ್ಲಾ ದಾಖಲೆಗಳನ್ನು ಸಲ್ಲಿಸಿರುವ ಬಗ್ಗೆ ಖಾತರಿಪಡಿಸಿಕೊಂಡು ಅರ್ಜಿಯನ್ನು ಸ್ವೀಕರಿಸಬಹುದಾಗಿದೆ. ಒಂದು ವೇಳೆ ನಿಗದಿತ ಚೆಕ್‌ಲಿಸ್ಟ್ ಅನ್ವಯ ದಾಖಲೆಗಳು ಲಭ್ಯವಿಲ್ಲದಿದ್ದಲ್ಲಿ ಸದರಿ ಅರ್ಜಿಯನ್ನು ತಿರಸ್ಕರಿಸಬಹುದಾಗಿದೆ ಮತ್ತು ಅರ್ಜಿದಾರರು ಪುನಃ ಎಲ್ಲಾ ಪೂರಕ ದಾಖಲೆಗಳನ್ನು ಒದಗಿಸಿದಲ್ಲಿ ಪುನರ್‌ಪರಿಶೀಲಿಸಬಹುದಾಗಿದೆ. ಇದನ್ನು ಕಟ್ಟು ನಿಟ್ಟಾಗಿ ಪಾಲಿಸಲು ಸೂಚಿಸಿದೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಕಾಲದಡಿಯಲ್ಲಿ ಸ್ವೀಕರಿಸಿದ ಅರ್ಜಿಗಳನ್ನು ಪ್ರಾಮುಖ್ಯತೆಯ ಆಧಾರದ ಮೇರೆಗೆ ಕಡತಗಳ ಮೇಲೆ ಸಕಾಲ ಅರ್ಜಿ ಹಾಗೂ ಅದಕ್ಕೆ ನಿಗದಿಪಡಿಸಿದ ಕಾಲಾವಧಿಯನ್ನು ಕೆಂಪು ಶಾಯಿಯಲ್ಲಿ ನಮೂದಿಸಿ ಕಡತವನ್ನು ಚಾಲನೆಗೊಳಿಸುವುದು, ಸಕ್ಷಮ ಪ್ರಾಧಿಕಾರ/ ಉ.ನಿ ಕಛೇರಿಗೆ ಕಳುಹಿಸಿದ ಕಡತಗಳನ್ನು ಉ.ನಿ ಕಛೇರಿಯವರು ನಿಗದಿತ ಅವಧಿಯೊಳಗೆ ಮಂಜೂರು/ ತಿರಸ್ಕೃತ ಕ್ರಮ ತೆಗೆದುಕೊಂಡು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೇವೆ ವಿಲೇವಾರಿ ಮಾಡಿದ ಬಗ್ಗೆ ಮಾಹಿತಿಯನ್ನು ನೀಡಿ ಸಕಾಲ ತಂತ್ರಾಂಶದಲ್ಲಿ ಆಗಿಂದಾಗ್ಗೆ ಜಿಎಸ್‌ಎಂ ಸಂಖ್ಯೆಯ ಆಧಾರದ ಮೇಲೆ ಸೇವೆಯ ಪ್ರಗತಿಯನ್ನು ನಮೂದಿಸಿ ಅರ್ಜಿಯನ್ನು ಮುಕ್ತಾಯಗೊಳಿಸಲು ಅನುವು ಮಾಡಿಕೊಡುವುದು. ಕೆಲವು ಸಂದರ್ಭದಲ್ಲಿ ಸೇವೆಯನ್ನು ಅರ್ಜಿದಾರರಿಗೆ ನಿಗದಿತ ದಿನಾಂಕದೊಳಗೆ ನೀಡಿದ್ದಾಗ್ಯೂ ಸಹಾ ಸಕಾಲ ತಂತ್ರಾಂಶದಲ್ಲಿ ಅರ್ಜಿಯನ್ನು ಮುಕ್ತಾಯಗೊಳಿಸದಿರುವುದು ಕಂಡು ಬಂದಿದೆ, ಈ ಹಿನ್ನೆಲೆಯಲ್ಲಿ ಪ್ರತಿನಿತ್ಯ ಅರ್ಜಿಗಳ ಸ್ವೀಕೃತಿ ಮತ್ತು ವಿಲೇವಾರಿಯಾದ ಬಗ್ಗೆ ಪ್ರತ್ಯೇಕ ವಹಿ ನಿರ್ವಹಿಸಿ ನಿಗಾವಹಿಸುವುದು. ನಿಗದಿತ ದಿನಾಂಕ ಮೀರಿದ ಅರ್ಜಿಗಳಿಗೆ ಪ್ರತಿ ದಿನಕ್ಕೆ ರೂ.20.00 ದಂಡವನ್ನು ವಿಧಿಸಬಹುದಾಗಿದೆ.

**ಆಯುಕ್ತರು,**
**ಸಾರ್ವಜನಿಕ ಶಿಕ್ಷಣ ಇಲಾಖೆ.**

**ಪ್ರತಿಯನ್ನು ವಂದನೆಗಳೊಂದಿಗೆ :**

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣ ಇಲಾಖೆ, 6ನೇ ಮಹಡಿ, 2ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು–1 ರವರಿಗೆ,
2) ಸರ್ಕಾರದ ಕಾರ್ಯದರ್ಶಿಗಳು(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು–1 ರವರಿಗೆ,

**ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ :**

1) ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು,
2) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು,
3) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಗುಲ್ಬರ್ಗಾ,
4) ನಿರ್ದೇಶಕರು, ಎಸ್.ಎಸ್.ಎಲ್.ಸಿ/ಇತರೆ ಪರೀಕ್ಷೆಗಳು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು,
5) ನಿರ್ದೇಶಕರು, ಪ್ರೌಢ ಶಿಕ್ಷಣ / ಪ್ರಾಥಮಿಕ ಶಿಕ್ಷಣ / ಭಾಷಾ ಅಲ್ಪಸಂಖ್ಯಾತ ಶಾಲೆಗಳ ನಿರ್ದೇಶನಾಲಯ, ಡಿ.ಎಸ್.ಇ.ಆರ್.ಟಿ., ಕರ್ನಾಟಕ ಪಠ್ಯ ಪುಸ್ತಕ ಸಂಘ, ಬೆಂಗಳೂರು,
6) ಸಹನಿರ್ದೇಶಕರು ಹಾಗೂ ಪದನಿಮಿತ್ತ ಕಾರ್ಯದರ್ಶಿಗಳು, ಕ ಪ್ರೌ ಶಿ ಪ ಮಂಡಳಿ, ಬೆಳಗಾಂ/ಗುಲ್ಬರ್ಗಾ/ಮೈಸೂರು
7) ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ರವರಿಗೆ ಸೂಕ್ತ ಕ್ರಮಕ್ಕಾಗಿ,
8) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಸೂಕ್ತ ಕ್ರಮಕ್ಕಾಗಿ,
9) ಕಛೇರಿ ಪ್ರತಿ.